ಕರ್ನಾಟಕ ಸರ್ಕಾರ

# ಉಪ ನಿರ್ದೇಶಕರವರ ಕಛೇರಿ (ಗ್ರಾಮೀಣ ಕೈಗಾರಿಕೆ), ಜಿಲ್ಲಾ ಪಂಚಾಯತ ಕೈಗಾರಿಕಾ ವಿಭಾಗ ಬಾಗಲಕೋಟೆ

ಜಿಲ್ಲಾ ಆಡಳಿತ ಭವನ, ರೂಂ ನಂ: 239, ನವನಗರ, ಬಾಗಲಕೋಟೆ-587103.

☎:08354-223744. **EmailID:**khagrabgk123@gmail.com

ಸಂ:ಜಿಪಂಬಾ/ಉನಿ(ಗ್ರಾ.ಕೈ)/ಅ.ಅ/2024-25 ದಿನಾಂಕ: 07-10-2024

## ಅಧಿಸೂಚನೆ

ವಿಷಯ: 2024-25 ನೇ ಸಾಲಿನಲ್ಲಿ ಉಪನಿರ್ದೇಶಕರು(ಗ್ರಾ.ಕೈ) ಜಿ.ಪಂ,ಕೈಗಾರಿಕಾ ವಿಭಾಗ ಕಚೇರಿಯ ಅನುಮೋದಿತ ವೈಯಕ್ತಿಕ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಫಲಾನುಭವಿಗಳ ಆಯ್ಕೆಗಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸುವ ಬಗ್ಗೆ.

ಉಲ್ಲೇಖ:1) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬಾಗಲಕೋಟೆ ಇವರ ಪತ್ರ ಸಂ: ಜಿಪಂಬಾ/ಯೋವಿ/ಜಿಪಂ/ಲಿಂಡಾ/ವಿನಿದಿ-56/2024-25, ದಿನಾಂಕ:17-09-2024.

2) ಅಪರ ಮುಖ್ಯ ಕಾರ್ಯದರ್ಶಿಗಳು(ಪಂ.ರಾಜ್),ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ: ಗ್ರಾಅಪಂರಾ/330/ಜಿಪಸ/2022 ದಿ:02-07-2022.

*****

2024-25ನೇ ಸಾಲಿಗೆ ಉಪನಿರ್ದೇಶಕರು(ಗ್ರಾ.ಕೈ) ಜಿ.ಪಂ, ಕೈಗಾರಿಕಾ ವಿಭಾಗ ಬಾಗಲಕೋಟೆ ಕಚೇರಿಯ ಉಲ್ಲೇಖ(1) ರಂತೆ ಅನುಮೋದಿತ ಕ್ರಿಯಾ ಯೋಜನೆಯನ್ವಯ ವಿವಿಧ ವೈಯಕ್ತಿಕ ಫಲಾನುಭವಿ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಅರ್ಹ ಗ್ರಾಮೀಣ ಪ್ರದೇಶದ ಫಲಾನುಭವಿಗಳನ್ನು ಆಯ್ಕೆ ಮಾಡಿ ಸೌಲಭ್ಯಗಳನ್ನು ಒದಗಿಸಬೇಕಾಗಿರುತ್ತದೆ. ಅದಕ್ಕಾಗಿ ಉಲ್ಲೇಖ(2)ರಂತೆ ಆನ್‌ಲೈನ್ ಮೂಲಕ ಅರ್ಜಿಯನ್ನು ಆಹ್ವಾನಿಸಿದ್ದು, ವಿವರ ಈ ಕೆಳಗಿನಂತಿರುತ್ತವೆ.

| 1 | ಜಿಲ್ಲಾ ಉದ್ಯಮ ಕೇಂದ್ರ ಮತ್ತು ವೃತ್ತಿಪರ ಕುಶಲಕರ್ಮಿಗಳಿಗೆ ಸುಧಾರಿತ ಸಲಕರಣೆ ಸರಬರಾಜು ಯೋಜನೆ | | | |
|---|---|---|---|---|
| ಕ್ರಸಂ | ವಿಷಯಗಳು | ವಿದ್ಯಾರ್ಹತೆ | ವಯಸ್ಸು | ಇತರೆ ಅರ್ಹತೆಗಳು |
| 1 | ವಿದ್ಯುತ್‌ಚಾಲಿತ ಹೊಲಿಗೆಯಂತ್ರ | 10ನೇ ತರಗತಿ ಕಡ್ಡಾಯ | **ಪ.ಜಾತಿ & ಪ.ಪಂ:** ಕನಿಷ್ಟ 18(25-10-2006) ಮತ್ತು ಗರಿಷ್ಟ 45 (25-10-1979) ವರ್ಷಗಳು **ಇತರೆ ವರ್ಗ:** ಕನಿಷ್ಟ 18(25-10-2006) ಮತ್ತು ಗರಿಷ್ಟ 38 (25-10-1986) ವರ್ಷಗಳು | • ಒಂದು ಕುಟುಂಬಕ್ಕೆ ಒಂದು ಉಪಕರಣಕ್ಕೆ ಒಂದು ಅರ್ಜಿ ಮಾತ್ರ ಸಲ್ಲಿಸತಕ್ಕದ್ದು. • ಅಭ್ಯರ್ಥಿಯು ಗ್ರಾಮೀಣ ಪ್ರದೇಶದವರಾಗಿರಬೇಕು. • ಹೊಲಿಗೆಯಂತ್ರಕ್ಕೆ ಮಹಿಳಾ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸತಕ್ಕದ್ದು. • ಸರ್ಕಾರಿ ನೌಕರರು ಅಥವಾ ಅವಲಂಬಿತರು ಹಾಗೂ ಈ ಹಿಂದೆ ಈ ಇಲಾಖೆಯಿಂದ ಯಾವುದೇ ಉಪಕರಣ ಪಡೆದಿರುವವರು ಅರ್ಜಿ ಸಲ್ಲಿಸಲು ಅರ್ಹರಿರುವದಿಲ್ಲ. |
| 2 | ಬಡಿಗತನ ಮತ್ತು ದೋಬಿ | – | **ಇತರೆ ವರ್ಗ ಪ.ಜಾತಿ & ಪ.ಪಂ:** ಕನಿಷ್ಟ 18(25-10-2006) ಮತ್ತು ಗರಿಷ್ಟ 45 (25-10-1979) ವರ್ಷಗಳು | |

ಮೇಲಿನಂತೆ ಕಾರ್ಯಕ್ರಮಗಳು ವೈಯಕ್ತಿಕ ಸೌಲಭ್ಯಗಳಿಗೆ ಆನ್‌ಲೈನ್ ಮೂಲಕ ಅರ್ಜಿಯನ್ನು ಬಾಗಲಕೋಟೆ ಜಿಲ್ಲೆಯ ಅಧಿಕೃತ ವೆಬ್‌ಸೈಟ್ https://bagalkot.nic.in ನಲ್ಲಿ ಆಹ್ವಾನಿಸಲಾಗಿದೆ. ಅರ್ಹ ಫಲಾನುಭವಿಗಳು ದಿನಾಂಕ: 25-10-2024 ರಿಂದ 25-11-2024 ರೊಳಗೆ ಅರ್ಜಿ ಸಲ್ಲಿಸಿ ಈ ಕಚೇರಿಗೆ ಸ್ವೀಕೃತಿಯೊಂದಿಗೆ ಅರ್ಹ ದಾಖಲಾತಿಗಳನ್ನು ದಿನಾಂಕ: 30-11-2024 ರೊಳಗೆ ಈ ಕಚೇರಿಗೆ ಸಲ್ಲಿಸತಕ್ಕದ್ದು. ಅರ್ಜಿಯ ಜೊತೆಗಿನ ದಾಖಲಾತಿಗಳು ಈ ಕೆಳಗಿನಂತಿವೆ.

**ಸ್ವೀಕೃತಿಯ ಜೊತೆಗಿನ ದಾಖಲಾತಿಗಳು:**

1) ಅಭ್ಯರ್ಥಿಯ ಇತ್ತೀಚಿನ ಭಾವಚಿತ್ರ
2) ಆಧಾರ ಕಾರ್ಡ
3) ವಯಸ್ಸಿನ ಬಗ್ಗೆ ದಾಖಲೆ (ಶಾಲಾ ದಾಖಲಾತಿ/ವರ್ಗಾವಣೆ ಪತ್ರ/10ನೇ ತರಗತಿಯ ಅಂಕಪಟ್ಟಿ/ಇತರೆ)
4) ಜಾತಿ ಮತ್ತು ಆದಾಯ ಪ್ರಮಾಣ ಪತ್ರ
5) ಪಡಿತರ ಚೀಟಿ
6) ಹೊಲಿಗೆ ತರಬೇತಿ ಪ್ರಮಾಣ ಪತ್ರ
7) ಗ್ರಾ.ಪಂ ಉದ್ಯೋಗ ದೃಢೀಕರಣ ಪತ್ರ
8) ಮತದಾರರ ಗುರುತಿನ ಚೀಟಿ

**ಆಯ್ಕೆ ಪ್ರಕಿಯೆ:** ನಿಗದಿಪಡಿಸಿದ ಗುರಿಗಿಂತ ಅಧಿಕ ಅರ್ಜಿಗಳು ಸ್ವೀಕೃತವಾಗಿದ್ದಲ್ಲಿ ಜಿಲ್ಲಾ ಮಟ್ಟದ ಪರಿಶೀಲನಾ ಸಮಿತಿಯಿಂದ ಲಾಟರಿ ಮೂಲಕ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುವದು.

ಹೆಚ್ಚಿನ ಮಾಹಿತಿಗಾಗಿ ಈ ಕಚೇರಿಯ ದೂರವಾಣಿ ಸಂಖ್ಯೆ: 08354-223744.

ಉಪ ನಿರ್ದೇಶಕರು (ಗ್ರಾ.ಕೈ)
ಜಿಲ್ಲಾ ಪಂಚಾಯತ್ ಕೈಗಾರಿಕಾ ವಿಭಾಗ,
ಬಾಗಲಕೋಟೆ.

ಪ್ರತಿಯನ್ನು:

1) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಬಾಗಲಕೋಟೆ ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2) ಜಿಲ್ಲಾ ಮಾಹಿತಿ ಅಧಿಕಾರಿ, ಎನ್.ಐ.ಸಿ, ಜಿಲ್ಲಾಡಳಿತ ಭವನ, ಬಾಗಲಕೋಟೆ ಇವರಿಗೆ ಸಲ್ಲಿಸುತ್ತಾ, ಬಾಗಲಕೋಟೆ ಜಿಲ್ಲೆಯ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕೋರಿದೆ.
3) ಕಚೇರಿ ಸೂಚನಾ ಫಲಕಕ್ಕೆ.
4) ಕಚೇರಿ ಪ್ರತಿ.